RNU AIR DHARWAD

JULY 26,2024
ALL INDIA RADIO- DHARWAD
PRADESH SAMACHARA (KANNADA) 7:05 AM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ವಿವೇಕಾದಿತ್ಯ ಕನಿಯಾಲ

<><><>

ಮುಖ್ಯಾಂಶಗಳು:

- ಅನಿರ್ದಿಷ್ಟಾವಧಿಗೆ ಉಭಯ ಸದನಗಳ ಕಲಾಪ ಮುಂದೂಡಿಕೆ; ಹಲವು ವಿಧೇಯಕಗಳಿಗೆ, ಅಂಗೀಕಾರ.
- ಮುಡಾ ಹಗರಣ; ರಾಜ್ಯಪಾಲರಿಗೆ ಪ್ರತಿಪಕ್ಷಗಳ ನಿಯೋಗದಿಂದ, ದೂರು ಸಲ್ಲಿಕೆ.
- ಕರಾವಳಿ ಹಾಗೂ ಮಲೆನಾಡಿನಲ್ಲಿ, ಮುಂದುವರಿದ ಮಳೆ ಆರ್ಭಟ; ಪ್ರವಾಹ ಎದುರಿಸಲು, ಜಿಲ್ಲಾಡಳಿತಗಳಿಂದ ಸಕಲ ಸಿದ್ಧತೆ.
- ಕಾರ್ಗಿಲ್ ವಿಜಯ್ ದಿವಸ್; ಪರಮ ವೀರರಿಗೆ ಇಂದು, ನಾಡಿನಾದ್ಯಂತ ಗೌರವಾರ್ಪಣೆ.

<><><>

ಈಗ ವಾರ್ತೆಗಳ ವಿವರ

<><><>

ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಾತಿಗಾಗಿ ನಡೆಸುವ, ನೀಟ್ ಪರೀಕ್ಷೆಯನ್ನು ರದ್ದು ಪಡಿಸಿ, ಸಿ.ಇ.ಟಿ.ಯನ್ನೇ ಮುಂದುವರೆಸುವ ಮಹತ್ವದ ನಿರ್ಣಯವನ್ನು, ವಿಧಾಮಂಡಲದ ಉಭಯ ಸದನಗಳಲ್ಲಿ ಅಂಗೀಕರಿಸಲಾಗಿದೆ.

ನೀಟ್ ಪರೀಕ್ಷೆ ರದ್ದುಪಡಿಸುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿ ವಿಧಾನಸಭೆಯಲ್ಲಿ ನಿರ್ಣಯ ಮಂಡಿಸಿ ಅಂಗೀಕರಿಸಲಾಯಿತು. ಸಿಇಟಿ ಅಂಕಗಳನ್ನು ಆಧರಿಸಿ ಪ್ರವೇಶಾತಿ ನೀಡಬೇಕೆಂದು ಒತ್ತಾಯಿಸಲಾಗಿದೆ.

ಪ್ರತಿಪಕ್ಷಗಳ ಸದಸ್ಯರ ವಿರೋಧದ ನಡುವೆಯೂ, ವೈದ್ಯಕೀಯ ಶಿಕ್ಷಣ ಖಾತೆ ಸಚಿವ ಡಾಕ್ಟರ್ ಶರಣಪ್ರಕಾಶ್ ಪಾಟೀಲ ಅವರು, ವಿಧಾನಸಭೆಯಲ್ಲಿ ಹಾಗೂ ವಿಧಾನಪರಿ 'ತ್ ನಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ನೀಟ್ ಪರೀಕ್ಷೆಯ ವಿರುದ್ಧ ನಿರ್ಣಯವನ್ನು ಮಂಡಿಸಿದರು.

ಆಡಳಿತ ಪಕ್ಷದ ಸದಸ್ಯರು ಬೆಂಬಲ ಸೂಚಿಸಿದ ನಂತರ, ಸದನ ಅಂಗೀಕರಿಸಿತು.

<><><>

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ – 'ಮುಡಾ'ದಲ್ಲಿ ನಡೆದಿದೆ ಎನ್ನಲಾದ ಅಕ್ರಮದಲ್ಲಿ, ತಮ್ಮ ಪಾತ್ರವಿಲ್ಲ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ವಿಧಾನಪರಿಷತ್‌ನಲ್ಲಿ ಮುಡಾ ಅಕ್ರಮದ ಕುರಿತು ಚರ್ಚೆಗೆ ಅವಕಾಶ ನೀಡಬೇಕೆಂದು, ಪ್ರತಿಪಕ್ಷಗಳಾದ ಬಿ.ಜೆ.ಪಿ ಹಾಗೂ ಜೆಡಿಎಸ್ ಸದಸ್ಯರು, ಸದನದ ಬಾವಿಗಿಳಿದು ಪ್ರತಿಭಟನೆ ನಡೆಸುತ್ತಿದ್ದ ಸಂದರ್ಭದಲ್ಲಿ, ಮಧ್ಯಪ್ರವೇಶಿಸಿ ಮಾತನಾಡಿದ ಮುಖ್ಯಮಂತ್ರಿ, ಕಾನೂನು ಬದ್ಧವಾಗಿ ನಿವೇಶನ ಹಂಚಿಕೆ ಮಾಡುವಂತೆ ಅರ್ಜಿ ಸಲ್ಲಿಸಿದ್ದೆವು. ನಿಯಮಾನುಸಾರ ನಿವೇಶನ ಹಂಚಿಕೆ ಮಾಡಿದ್ದಾರೆ ಎಂದು, ಸಮರ್ಥಿಸಿಕೊಂಡರು.

<><><>

ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಚರ್ಚೆಗೆ ಅವಕಾಶ ನೀಡಬೇಕೆಂದು ಪ್ರತಿಪಕ್ಷಗಳ ಧರಣಿಯ ನಡುವೆಯೇ, ಸರ್ಕಾರ 7 ವಿಧೇಯಕಗಳನ್ನು ಅಂಗೀಕರಿಸಿತು.

<><><>

'ಮುಡಾ' ಹಗರಣಕ್ಕೆ ಸಂಬಂಧಿಸಿ, ರಾಜ್ಯ ಸರ್ಕಾರದ ವಿರುದ್ಧ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಗೆ ಬಿಜೆಪಿ, ಜೆಡಿಎಸ್ ಒಳಗೊಂಡ ಪ್ರತಿಪಕ್ಷಗಳ ನಿಯೋಗ ದೂರು ಸಲ್ಲಿಸಿದೆ.

ಉಭಯ ಸದನಗಳ ಕಲಾಪವನ್ನು ಅನಿರ್ದಿಷ್ಟಾವಧಿಗೆ ಸಭಾಧ್ಯಕ್ಷರು ಮುಂದೂಡಿದ ಬಳಿಕ, ರಾಜಭವನಕ್ಕೆ ಪ್ರತಿಪಕ್ಷಗಳ ನಿಯೋಗ ತೆರಳಿ ದೂರು ಸಲ್ಲಿಸಿತು. ಇಂದು ಬೆಂಗಳೂರಿನಿಂದ ಮೈಸೂರಿಗೆ ಪಾದಯಾತ್ರೆ ನಡೆಸಲು, ವಿಪಕ್ಷಗಳು ಸಜ್ಜಾಗಿವೆ.

<><><>

ರಾಜ್ಯದ ಕರಾವಳಿ ಸೇರಿದಂತೆ, ಒಳನಾಡಿನ ಕೆಲವೆಡೆ ಮುಂದಿನ ಮೂರು ದಿನ ವ್ಯಾಪಕ ಮಳೆಯಾಗಲಿದೆ ಎಂದು, ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ. ಇಂದು ಮತ್ತು ನಾಳೆ, ಒಳನಾಡಿನ ಜಿಲ್ಲೆಗಳಾದ ಬೆಳಗಾವಿ, ಚಿಕ್ಕಮಗಳೂರು, ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಆರೇಂಜ್ ಅಲರ್ಟ್ ಹಾಗೂ ಬೀದರ್, ಕಲಬುರಗಿ, ವಿಜಯಪುರ, ಯಾದಗಿರಿ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ.

ಶಿವಮೊಗ್ಗ ಜಿಲ್ಲೆ, ಶರಾವತಿ ಯೋಜನೆಯ ಲಿಂಗನಮಕ್ಕಿ ಜಲಾಶಯ ಭರ್ತಿಯಾಗುವ ಹಂತ ತಲುಪಿದೆ. ಯಾವುದೇ ಕ್ಷಣದಲ್ಲಿ ನೀರನ್ನು ನದಿಗೆ ಹರಿ ಬಿಡುವ ಸಾಧ್ಯತೆ ಇದೆ. ಜಲಾನಯನ ಪ್ರದೇಶದ ಜನ ಎಚ್ಚರ ವಹಿಸುವಂತೆ, ಕೆ.ಪಿ.ಸಿ.ಎಲ್. ಅಧಿಕಾರಿಗಳು ಮುನ್ನೆಚ್ಚರಿಕೆ ನೀಡಿದ್ದಾರೆ.

ಯಾದಗಿರಿ ಜಿಲ್ಲೆ, ಹುಣಸಗಿ ತಾಲೂಕು, ನಾರಾಯಣಪುರ ಗ್ರಾಮದ, ಬಸವಸಾಗರ ಜಲಾಶಯದ, 25 ಕ್ರಸ್ಟ್ ಗೇಟ್‌ಗಳ ಮೂಲಕ, 2 ಲಕ್ಷ 25 ಸಾವಿರ ಕ್ಯೂಸೆಕ್‌ನ ಷ್ಟ ನೀರನ್ನು ಕೃಷ್ಣ ನದಿಗೆ, ಹರಿಸಲಾಗುತ್ತಿದೆ. ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ, ಯಾದಗಿರಿ ಜಿಲ್ಲಾಧಿಕಾರಿ ಬಿ. ಸುಶೀಲಾ.

<><><>

ಜಿಲ್ಲಾಧಿಕಾರಿ ಡಾ. ಬಿ. ಸುಶೀಲಾ ಧ್ವನಿ 28 ಸೆಕೆಂದುಗಳು

<><><>

ವಿಜಯಪುರ ಜಿಲ್ಲೆ, ಆಲಮಟ್ಟಿಯ ಲಾಲ ಬಹದ್ದೂರ್ ಶಾಸ್ತ್ರಿ ಜಲಾಶಯದಿಂದ, ಒಳ ಹರಿವು ಸಹ ಹೆಚ್ಚಿದ ಹಿನ್ನೆಲೆ, ನಾರಾಯಣಪುರ ಸಮೀಪದ ಛಾಯಾ ಭಗವತಿ ದೇಗುಲದ ಮೆಟ್ಟಿಲ ವರೆಗೆ ನೀರು ಬಂದಿದೆ.

ಕೃಷ್ಣ ನದಿಗೆ ಹೆಚ್ಚಿನ ಪ್ರಮಾಣದ ನೀರು ಹರಿದು ಬರುವ ಸಂಭವವಿದೆ. ಸಂಗಮ ಬಳಿಯ, ಗುರ್ಜಾಪೂರ ಬ್ಯಾರೇಜ್ ಸುತ್ತಲಿನ ಗ್ರಾಮಸ್ಥರಿಗೆ ಪ್ರವಾಹದ ಭೀತಿ ಎದುರಾಗಿದೆ. ಮೀನುಗಾರರು ಸುರಕ್ಷಿತ ಸ್ಥಳಕ್ಕೆ ತೆರಳುವಂತೆ, ಯಾದಗಿರಿ ಜಿಲ್ಲೆ ವಡಗೇರಾ ತೆಹಸೀಲ್ದಾರ ಶ್ರೀನಿವಾಸ್ ಚಾಪೇಲ್ ಸೂಚಿಸಿದ್ದಾರೆ.

<><><>

ಮಡಿಕೇರಿ ನಗರದ ಶ್ರೀ ಓಂಕಾರೇಶ್ವರ ದೇವಾಲಯ ರಸ್ತೆಯ ಒಂದು ಭಾಗ, ಭಾರೀ ಮಳೆಗೆ ಕುಸಿದಿದೆ. ರಸ್ತೆಯ ಕೆಳ ಭಾಗದಲ್ಲಿ 10 ಕುಟುಂಬಗಳು ವಾಸಿಸುತ್ತಿವೆ. ಮಣ್ಣು ಕುಸಿಯುವ ಆತಂಕ ಎದುರಾಗಿದೆ.

ಹಾವೇರಿ ಜಿಲ್ಲೆಯ ತುಂಗಭದ್ರಾ ಹಾಗೂ ವರದಾ ನದಿ ಅಚ್ಚುಕಟ್ಟು ಪ್ರದೇಶದ, ಸಾವಿರದ 650 ರೈತರಿಗೆ ಸೇರಿದ, ಸಾವಿರದ 255 ಹೆಕ್ಟರ್ ಕೃಷಿ ಭೂಮಿಯ ಬೆಳೆ ಜಲಾವೃತಗೊಂಡಿದೆ; ನಿರಂತರ ಮಳೆಯಿಂದ, 610 ಮನೆಗಳಿಗೆ ಹಾನಿಯಾಗಿದೆ ಎಂದು, ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ ತಿಳಿಸಿದ್ದಾರೆ. 49 ರೈತರಿಗೆ ಸೇರಿದ, 31 ದಶಾಂಶ 2–7 ಹೆಕ್ಟರ್ ತೋಟಗಾರಿಕೆ ಬೆಳೆ ಕೂಡ ಜಲಾವೃತಗೊಂಡಿದೆ.

ಇಂದು ಮತ್ತು ನಾಳೆ, ಹಾವೇರಿ ಜಿಲ್ಲೆಯಾದ್ಯಂತ ಅಂಗನವಾಡಿ, ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಮಾತ್ರ ರಜೆ ಘೋಷಿಸಲಾಗಿದೆ. ಉತ್ತರಕನ್ನಡ ಜಿಲ್ಲೆಯ ಶಾಲೆ ಹಾಗೂ ಪದವಿ ಪೂರ್ವ, ಐಟಿಐ ಮತ್ತು ಡಿಪ್ಲೊಮಾ ಕಾಲೇಜುಗಳಿಗೆ ಇಂದು ರಜೆ ಪ್ರಕಟಿಸಲಾಗಿದೆ.

ಬಾಗಲಕೋಟೆ ಜಿಲ್ಲೆಯ ಕೃಷ್ಣ, ಮಲಪ್ರಭಾ ಹಾಗೂ ಘಟಪ್ರಭಾ ನದಿಗಳ ಜಲಾನಯನ ಪ್ರದೇಶದಲ್ಲಿ, ಪ್ರವಾಹ ಬೀತಿ ಉಂಟಾದಲ್ಲಿ ಗ್ರಾಮಸ್ಥರನ್ನು ತಕ್ಷಣವೇ ಸ್ಥಳಾಂತರಿಸಲು, ಕ್ರಮ ಕೈಗೊಳ್ಳುವಂತೆ, ಜಿಲ್ಲಾಧಿಕಾರಿ ಜಾನಕಿ ಕೆ.ಎಂ. ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಬೆಳಗಾವಿ ಜಿಲ್ಲೆಯಲ್ಲಿ ವ್ಯಾಪಕ ಮಳೆಯಾಗುತ್ತಿರುವ ಹಿನ್ನೆಲೆ, ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ, ರಾಯಬಾಗ ತಾಲೂಕಿನ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

<><><>

ಬೆಣ್ಣೆ ಹಳ್ಳ ಹಾಗೂ ಮಲಪ್ರಭಾ ನದಿ ಪ್ರವಾಹಕ್ಕೊಳಗಾಗುವ ಗದಗ ಜಿಲ್ಲೆಯ ಗ್ರಾಮಗಳ, ಸಾರ್ವಜನಿಕರ ಸುರಕ್ಷತೆಗೆ ಪ್ರಥಮ ಆದ್ಯತೆ ನೀಡಲಾಗಿದೆ ಎಂದು, ಗದಗ ಜಿಲ್ಲಾಧಿಕಾರಿ ಗೋವಿಂದರೆಡ್ಡಿ ತಿಳಿಸಿದ್ದಾರೆ.

ನರಗುಂದ ಹಾಗೂ ರೋಣ ತಾಲೂಕಾಡಳಿತದೊಂದಿಗೆ ಪ್ರವಾಹ ಪರಿಸ್ಥಿತಿ ಅವಲೋಕಿಸಿ, ಸುದ್ದಿಗಾರರಿಗೆ ಜಿಲ್ಲಾಧಿಕಾರಿ ಮಾಹಿತಿ ನೀಡಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

25ನೇ ಕಾರ್ಗಿಲ್ ವಿಜಯ್ ದಿವಸ್ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಕಾರ್ಗಿಲ್ ಯುದ್ಧ ಸ್ಮಾರಕಕ್ಕೆ ಭೇಟಿ ನೀಡಲಿದ್ದಾರೆ. ಕರ್ತವ್ಯದ ವೇಳೆ ಪರಮ ತ್ಯಾಗ ಬಲಿದಾನ ಮಾಡಿದ ಯೋಧರಿಗೆ ನಮನ ಸಲ್ಲಿಸಲಿದ್ದಾರೆ.

<><><>

ಕಾರ್ಗಿಲ್ ವಿಜಯೋತ್ಸವದ 25ನೇ ವರ್ಷಾಚರಣೆ ನಿಮಿತ್ತ, ಧಾರವಾಡ ಕಾರ್ಗಿಲ್ ಸ್ಮಾರಕ ಸಮಿತಿ, ಇಂದು ಬೆಳಗ್ಗೆ 10.30 ಕ್ಕೆ, ಜಿಲ್ಲಾಧಿಕಾರಿ ಕಚೇರಿ ಆವರಣದ ಕಾರ್ಗಿಲ್ ಸ್ತೂಪದ ಬಳಿ, ಶೌರ್ಯಗಾಥೆ ಬಿಂಬಿಸುವ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು, ಸಮಿತಿ ಅಧ್ಯಕ್ಷ ಚಂದ್ರಶೇಖರ್ ಅಮೀನಗಡ ಧಾರವಾಡದಲ್ಲಿ ತಿಳಿಸಿದ್ದಾರೆ.

<><><>

ಮಕ್ಕಳು ಹಾಗೂ ಯುವಜನರ ಸೃಜಶೀಲ ಪ್ರತಿಭಾ ಪ್ರದರ್ಶನಕ್ಕೆ, ಚಿತ್ರಕಲೆ ಉತ್ತಮ ಮಾಧ್ಯಮ. ಜಿಲ್ಲಾವಾರು ಕಲಾ ವೃತ್ತಗಳನ್ನು ಸಂಘಟಿಸಿ, ಚಿತ್ರಕಲೆಯ ಬಗ್ಗೆ ಆಸಕ್ತಿ ಮೂಡಿಸುವ ಯೋಜನೆಯನ್ನು, ಕರ್ನಾಟಕ ಲಲಿತ ಕಲಾ ಅಕಾದೆಮಿ ಶೀಘ್ರ ಅನುಷ್ಠಾನಗೊಳಿಸಲಿದೆ.

ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ, 135ನೇ ಸಂಸ್ಥಾಪನಾ ವರ್ಷದ, ಒಂಬತ್ತು ದಿನಗಳ ಸಂಭ್ರಮಾಚರಣೆ ಹಿನ್ನೆಲೆ, ಕಲಾ ಮಂದಿರದ ಲೋಕಾರ್ಪಣೆ ಹಾಗೂ ಚಿತ್ರಕಲಾ ಪ್ರದರ್ಶನ ಉದ್ಘಾಟಿಸಿದ, ಬೆಂಗಳೂರಿನ ರಾಜ್ಯ ಲಲಿತಕಲಾ ಅಕಾದೆಮಿ ಅಧ್ಯಕ್ಷ, ಪ. ಸಂಪತ್ ಕುಮಾರ, ಈ ವಿಷಯ ತಿಳಿಸಿದರು.

ಯುವ ಕಲಾವಿದರನ್ನು ಪ್ರೋತ್ಸಾಹಿಸಲು, ಅಕಾದೆಮಿ ದತ್ತಿನಿಧಿ ಪ್ರಶಸ್ತಿಗಳನ್ನು ಪ್ರಕಟಿಸಲಿದೆ ಎಂದು, ಅವರು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಅಧ್ಯಕ್ಷ ಪ. ಸಂಪತ್ ಕುಮಾರ ಧ್ವನಿ 44 ಸೆಕೆಂದುಗಳು

<><><>

ರಾಷ್ಟ್ರೀಯ ಆರೋಗ್ಯ ಗುಣಮಟ್ಟ ಮೌಲ್ಯಮಾಪನ ಪುರಸ್ಕಾರ–2024 ಕ್ಕೆ ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲೂಕಿನ, ಮಿಟ್ಟೇಮರಿ ಮತ್ತು ಪಾತಪಾಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಭಾಜನವಾಗಿವೆ.

ಗ್ರಾಮೀಣ ಪ್ರದೇಶದಲ್ಲಿ ಗುಣಮಟ್ಟದ ಆರೋಗ್ಯ ಸೇವೆ ಒದಸುವ, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ, ಕೇಂದ್ರ ಸರ್ಕಾರದ ರಾಷ್ಟ್ರೀಯ ಆರೋಗ್ಯ ವ್ಯವಸ್ಥೆಗಳ ಸಂಪನ್ಮೂಲ ಕೇಂದ್ರ, ಈ ಪುರಸ್ಕಾರವನ್ನು ನೀಡಿ, ಗೌರವಿಸುತ್ತದೆ.

ಪ್ರಸಕ್ತ ಸಾಲಿನಲ್ಲಿ ರಾಷ್ಟ್ರೀಯ ಆರೋಗ್ಯ ವ್ಯವಸ್ಥೆಗಳ ಸಂಪನ್ಮೂಲ ಕೇಂದ್ರ, N.H.S.R.C. ರಾಜ್ಯದ 26 ಪ್ರಾಥಮಿಕ ಮತ್ತು Pastor ಆರೋಗ್ಯ ಕೇಂದ್ರಗಳನ್ನು, ಹಲವು ಮಾನದಂಡಗಳೊಂದಿಗೆ, ಸಮೀಕ್ಷೆಗೆ ಒಳಪಡಿಸಿತ್ತು.

<><><>

ಕಲಬುರಗಿ ಜಿಲ್ಲೆಯ ಗಾಣಗಾಪುರ ದತ್ತಾತ್ರೇಯ ದೇವಸ್ಥಾನ ಅಭಿವೃದ್ಧಿಗೆ, 83 ಕೋಟಿ 52 ಲಕ್ಷ ರೂಪಾಯಿ ಮಂಜೂರು ಮಾಡುವಂತೆ, ಬಿಜೆಪಿ ಸಂಸದ ಜಗ್ಗೇಶ್ ಕೇಂದ್ರಕ್ಕೆ ಮನವಿ ಮಾಡಿದ್ದಾರೆ.

ರಾಜ್ಯಸಭೆಯಲ್ಲಿ ವಿ ‘ಯ ಪ್ರಸ್ತಾಪಿಸಿದ ಅವರು, ದಕ್ಷಿಣ ಕಾಶಿ ಎಂದೇ ಪ್ರಸಿದ್ಧವಾದ ಕ್ಷೇತ್ರವನ್ನು ಅಭಿವೃದ್ಧಿ ಪಡಿಸುವಂತೆ, ಮನವಿ ಮಾಡಿದರು.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಬರುವ ಭಾನುವಾರ 28 ರಂದು, ಆಕಾಶವಾಣಿಯಲ್ಲಿ, ತಮ್ಮ ಮನ್ ಕಿ ಬಾತ್ ಕಾರ್ಯಕ್ರಮ ಪ್ರಸ್ತುತ ಪಡಿಸಲಿದ್ದಾರೆ.

ಮನ್ ಕೀ ಬಾತ್‌ನಲ್ಲಿ ಸಲಹೆ ನೀಡಲು, My Gov ಅಥವಾ NaMo ಅಪ್ಲಿಕೇಶನ್‌ನಲ್ಲಿ ಅನಿಸಿಕೆ ಹಂಚಿಕೊಳ್ಳುವಂತೆ, ತಮ್ಮ ಸಂದೇಶವನ್ನು 1800 11 7800 ಗೆ ಧ್ವನಿ ಮುದ್ರಿಸಿ, ಕಳುಹಿಸುವಂತೆ ಪ್ರಧಾನಮಂತ್ರಿ ಕೋರಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

ಇಂದಿನಿಂದ ಆಗಸ್ಟ್ 11ರ ವರೆಗೆ, ಒಲಿಂಪಿಕ್ಸ್ ಕ್ರೀಡಾಕೂಟದ ದಿನದ ಮುಖ್ಯಾಂಶಗಳು ಪ್ರಸಾರವಾಗುವುದರಿಂದ, ಬೆಳಿಗ್ಗೆ 7 ಗಂಟೆ 35 ನಿಮಿಷಕ್ಕೆ ಪ್ರಸಾರವಾಗುವ, ರಾಷ್ಟ್ರೀಯ ವಾರ್ತೆಗಳು, ಬೆಳಗ್ಗೆ 9 ಗಂಟೆ 5 ನಿಮಿಷಕ್ಕೆ ಪ್ರಸಾರವಾಗಲಿದೆ.

ಧಾರವಾಡ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶೇಖರಗೌಡ ರಾಮತ್ನಾಳ ಸಭೆ ನಡೆಸಿದರು.

ಚಿಕ್ಕಬಳ್ಳಾಪುರ ತಾಲೂಕು, ಸ್ಕಂದಗಿರಿ ಯಾತ್ರಾ ಸ್ಥಳದ ಅಕ್ರಮಗಳ ಬಗ್ಗೆ ತನಿಖೆ ನಡೆಸಲು, ಐವರು ಅಧಿಕಾರಿಗಳ ಸಮಿತಿ ರಚಿಸಿ, ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ಆದೇಶಿಸಿದ್ದಾರೆ.

ರೇಣುಕಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿ, ನ್ಯಾಯಾಂಗ ಬಂಧನದಲ್ಲಿರುವ ನಟ, ಆರೋಪಿ ದರ್ಶನ್, ಮನೆ ಊಟ ಕೋರಿ ಸಲ್ಲಿಸಿದ್ದ ಅರ್ಜಿಯನ್ನು, ಬೆಂಗಳೂರಿನ 24ನೇ ಎ.ಸಿ.ಎಂ.ಎಂ. ನ್ಯಾಯಾಲಯ ವಜಾಗೊಳಿಸಿತು.

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಡಳಿತ ಮಂಡಳಿಗಳು ಇಲ್ಲದ ಕಾರಣ, ಕೇಂದ್ರದ 15ನೇ ಹಣಕಾಸು ಯೋಜನೆ ಅಡಿ, 8 ಸಾವಿರದ 500 ಕೋಟಿ ರೂಪಾಯಿ, ಬಾಕಿ ಉಳಿದಿದೆ ಎಂದು 5ನೇ ಹಣಕಾಸು ಆಯೋಗದ ಅಧ್ಯಕ್ಷ ಸಿ.ನಾರಾಯಣಸ್ವಾಮಿ, ರಾಯಚೂರಿನಲ್ಲಿ ಹೇಳಿದ್ದಾರೆ.

ಗದಗ ನಾಗಾವಿಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ, ಸ್ನಾತಕ ಪದವಿ ವಿದ್ಯಾರ್ಥಿಗಳಿಗೆ, ದೀಕ್ಷಾರಂಭ ಕಾರ್ಯಕ್ರಮ ಜರುಗಿತು.

ಕೋಲಾರ ನಗರದ ವಿವಿಧ ಗೊದಾಮುಗಳಲ್ಲಿ ದಾಸ್ತಾನು ಮಾಡಿದ್ದ, ಏಕ ಬಳಕೆಯ ಹತ್ತು ಟನ್ ಪ್ಲಾಸ್ಟಿಕ್ ಸಾಮಗ್ರಿಗಳನ್ನು ವಶಪಡಿಸಿಕೊಂಡಿದ್ದಾಗಿ, ನಗರಸಭೆ ಆಯುಕ್ತ ಶಿವಾನಂದ ತಿಳಿಸಿದ್ದಾರೆ.

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ಅನಿರ್ದಿಷ್ಟಾವಧಿಗೆ ಉಭಯ ಸದನಗಳ ಕಲಾಪ ಮುಂದೂಡಿಕೆ; ಹಲವು ವಿಧೇಯಕಗಳಿಗೆ, ಅಂಗೀಕಾರ.
- ಮುಡಾ ಹಗರಣ; ರಾಜ್ಯಪಾಲರಿಗೆ ಪ್ರತಿಪಕ್ಷಗಳ ನಿಯೋಗದಿಂದ, ದೂರು ಸಲ್ಲಿಕೆ.
- ಕರಾವಳಿ ಹಾಗೂ ಮಲೆನಾಡಿನಲ್ಲಿ, ಮುಂದುವರಿದ ಮಳೆ ಆರ್ಭಟ; ಪ್ರವಾಹ ಎದುರಿಸಲು, ಜಿಲ್ಲಾಡಳಿಗಳಿಂದ ಸಕಲ ಸಿದ್ಧತೆ.
- ಕಾರ್ಗಿಲ್ ವಿಜಯ್ ದಿವಸ್; ಪರಮ ವೀರರಿಗೆ ಇಂದು, ನಾಡಿನಾದ್ಯಂತ ಗೌರವಾರ್ಪಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 9 ಗಂಟೆ 5 ನಿಮಿಷಕ್ಕೆ.

<><><>